OS No. 2/2018 PW-2

**<u>ದಿನಾಂಕ 05.06.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ ಕೆ ವಿ  ವಕೀಲರಿಂದಃ</u>**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ಗೌರಮ್ಮ ನವರು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ವಾದಿ ಮಂಗಳವಾರ ಪೇಟೆ ಗ್ರಾಮದವರು. ನಾನು ಪ್ರತಿವಾದಿಯ ಸೋದರತ್ತೆಯ ಮಗ. ಪ್ರತಿವಾದಿ ಮತ್ತು ಆತನ ಕುಟುಂಬದವರು ಮಂಗಳವಾರ ಪೇಟೆ ಗ್ರಾಮದವರು ಎಂದರೆ ಸಾಕ್ಷಿಯು ಅವರು ಬೆಂಗಳೂರಿನಲ್ಲಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿಯ ತಂದೆ ನಾರಾಯಣಗೌಡರವರು ಮಂಗಳವಾರ ಪೇಟೆ ಗ್ರಾಮದವರು ಎಂದರೆ ನಿಜ. ಗೌರಮ್ಮ ನವರು ಬೆಂಗಳೂರಿನವರು ಎಂದರೆ ಸಾಕ್ಷಿಯು ಅಲ್ಲಿ ಹೋಗಿ ಇದ್ದರು ಎಂದು ನುಡಿಯುತ್ತಾರೆ. ವಾದಿ ಯಾವ ಠಾಣೆಯಲ್ಲಿ ದೂರು ನೀಡಿದ್ದರು ಎಂದು ಗೊತ್ತಿಲ್ಲ. ವಾದಿಗೆ ಕೊಡಿಸಿದ ನಿವೇಶನದ ಸರ್ವೆ ನಂಬರ್ 213. ಸರ್ವೆ ನಂಬರ್ 213 ಒಟ್ಟು ವಿಸ್ತೀರ್ಣ ಮತ್ತು ಎಷ್ಟು ನಿವೇಶನಗಳು ಆಗಿವೆ ಎಂದು ಗೊತ್ತಿಲ್ಲ. ಸರ್ವೆ ನಂಬರ್ 213ರಲ್ಲಿ ಯಾರು ಯಾವ ನಿವೇಶನಗಳನ್ನು ಖರೀದಿ ಮಾಡಿದ್ದರು ಎಂದು ಗೊತ್ತಿಲ್ಲ. ಗೌರಮ್ಮನವರ ಉಳಿದ 3 ನಿವೇಶಗಳನ್ನು ಮಾರಾಟ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಸರ್ವೆ ನಂಬರ್ 213 ಭೂ ಪರಿವರ್ತವನೆಯಾಗಿಲ್ಲ ಎಂದರೆ ಸುಳ್ಳು. ಪ್ರತಿವಾದಿಯ ತಂದೆಯಿಂದ ವಾದಿಯು ನೇರವಾಗಿ ನಿವೇಶನ ಖರೀದಿ ಮಾಡಬೇಕಾಗಿತ್ತು ಎಂದರೆ ಗೊತ್ತಿಲ್ಲ. ಪ್ರತಿವಾದಿಗೆ ಮೋಸ ಮಾಡಲು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆಂದರೆ ಸುಳ್ಳು. ಸರ್ವೆ ನಂಬರ್ 213 ರಲ್ಲಿ ಯಾವ ನಿವೇಶನಗಳು ಇಲ್ಲ ಎಂದರೆ ಸಾಕ್ಷಿಯು ಇನ್ನು ಕಟ್ಟಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಯಾರೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸುಳ್ಳು. ಸರ್ವೆ ನಂಬರ್ 213 ವ್ಯವಸಾಯದ ಜಮೀನು ಎಂದರೆ ಗೊತ್ತಿಲ್ಲ. ಸರ್ವೆ ನಂಬರ್ 213 ರ ಆಸ್ತಿಯು ಪ್ರತಿವಾದಿಗೆ ವಿಲ್ ಆಗಿದೆ ಎಂದರೆ ಗೊತ್ತಿಲ್ಲ. ನನಗೂ ಮತ್ತು ತಿಪ್ಪ ಗೌಡರವರ ನಡುವೆ ಮಾತುಕತೆ ಇಲ್ಲ ಎಂದರೆ ಸುಳ್ಳು. ನನಗೂ ಮತ್ತು ಪ್ರತಿವಾದಿಗೂ ವಿಶ್ವಾಸ ಇಲ್ಲ ಎಂದರೆ ಸಾಕ್ಷಿಯು ಕೇಸ್ ಹಾಕಿದ ನಂತರ ಮಾತನಾಡಿಸುವುದಿಲ್ಲವೆಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷಿ

ಪ್ರಮಾಣ ಪತ್ರ ಸಲ್ಲಿಸಿ, ಪ್ರತಿವಾದಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**